*O.S./18/2015*
*P.W-2*

(ಸಾಕ್ಷಿಯನ್ನು ದಿನಾಂಕ: 01.07.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಶ್ರೀ ಕೆ.ಎನ್.ಎಸ್. ವಕೀಲರಿಂದ , ಪ್ರತಿವಾದಿ 21 ರಿಂದ 25 ಮತ್ತು 31 ಪರ ವಕೀಲರಿಂದಃ**

ನಾನು ಬಿ.ಎಸ್ಸಿ ಪದವಿಧರನಾಗಿರುತ್ತೇನೆ. ನಾನು ಹುಟ್ಟಿ ಬೆಳೆದದ್ದು ಬೆಂಗಳೂರಿನಲ್ಲಿ ಎಂದರೆ ಸರಿ. ನಾನು ಉಜ್ಜನಿ ಗ್ರಾಮಕ್ಕೆ ಬಂದಿರುವುದಿಲ್ಲ ಎಂದರೆ ನಾನು ಬಂದು ಹೋಗಿ ಮಾಡುತ್ತಿರುತ್ತೇನೆ ಎಂದು ನುಡಿಯುತ್ತೇನೆ. ದಾವ ಸ್ವತ್ತನ್ನು ನಾನು ನೋಡಿರುತ್ತೇನೆ. ದಾವೆ ಕುರಿತು ನನಗೆ ಮಾಹಿತಿ ಇರುತ್ತದೆ. ದಾವೆ ದಾಖಲಿಸುವ ಪೂರ್ವದ ಸಂಗತಿಗಳನ್ನು ನನ್ನ ತಂದೆ ನನಗೆ ಹೇಳಿರುತ್ತಾರೆ. ನನ್ನ ಪ್ರಮಾಣಪತ್ರ ತಯಾರಿಸಲು ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ.

ನಿಪಿ-2 ವಂಶವೃಕ್ಷದ ಬಗ್ಗೆ ನನಗೆ ಮಾಹಿತಿ ಇರುತ್ತದೆ. ನಮ್ಮ ಮೂಲ ಪುರುಷ ನರಸರಾಜು ಬಿನ್ ಗೋವಿಂದರಾಜು ರವರಿಗೆ 5 ಜನ ಮಕ್ಕಳಿರುತ್ತಾರೆ. ಅವರೆಂದರೆ ಪುಟ್ಟರಾಜು, ಪಾಪರಾಜು, ತಿಮ್ಮರಾಜು, ನರಸರಾಜು ಮತ್ತು ಗೋವಿಂದರಾಜು ಆಗಿರುತ್ತಾರೆ. ದಾವ ಸ್ವತ್ತಿನ ವಿಸ್ತೀರ್ಣ 6 ಎಕರೆ 15 ಗುಂಟೆ ಇರುತ್ತದೆ. ದಾವ ಸ್ವತ್ತಿನ ಚೆಕ್ಕುಬಂದಿ ಏನು ಇರುತ್ತದೆಂದರೆ ನನಗೆ ಹೇಳಲು ಆಗುವುದಿಲ್ಲ. ಗೋವಿಂದರಾಜು ಬಿನ್ ನರಸರಾಜುರವರ ಮಗಳಾದ ನರಸಮ್ಮ ನವರನ್ನು ಈ ದಾವೆಯಲ್ಲಿ ಪಕ್ಷಗಾರಳನ್ನಾಗಿ ಮಾಡಿರುವುದಿಲ್ಲವೆಂದರೆ ಸರಿ. ಸಾಕ್ಷಿ ಸ್ವತಃ ಮುಂದುವರೆದು ಅವರು ಈಗಾಗಲೇ ವಿಭಾಗ ಮಾಡಿಕೊಂಡಿರುತ್ತಾರೆಂದು ನುಡಿಯುತ್ತಾರೆ. ನಿಪಿ-2 ರಲ್ಲಿ ಕಾಣಿಸಿರುವ ವೆಂಕಟರಾಜು ನರಸರಾಜು ರವರ ಮಗನಾಗಿರುತ್ತಾರೆ. ಸದರಿ ನರಸರಾಜು ಎಂದರೆ ನಮ್ಮ ಮೂಲ ಪುರುಷ ನರಸರಾಜು ಬಿನ್ ಗೋವಿಂದರಾಜು ಆಗಿರುತ್ತದೆ. ಸದರಿ ವೆಂಕಟರಾಜು ಮತ್ತು ತಿಮ್ಮರಾಜು ರವರನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲವೆಂದರೆ ಸರಿ. ಸಾಕ್ಷಿ ಸ್ವತಃ ಮುಂದುವರೆದು ಅವರು ಈಗಾಗಲೇ ವಿಭಾಗ ಮಾಡಿಕೊಂಡಿರುತ್ತಾರೆಂದು ನುಡಿಯುತ್ತಾರೆ.

ತಿಮ್ಮರಾಜು ಬಿನ್ ನರಸರಾಜು ಮತ್ತು ವೆಂಕಟರಾಜು ಬಿನ್ ನರಸರಾಜು ಹೇಗೆ ವಿಭಾಗ ಮಾಡಿಕೊಂಡಿರುತ್ತಾರೆಂದರೆ ನನ್ನ ತಂದೆಯ ತಾತ ನರಸರಾಜು ಬಿನ್ ಗೋವಿಂದರಾಜು ಸದರಿಯವರಿಗೆ ವಿಭಾಗ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತೇನೆ. ಸದರಿ ವಿಭಾಗ ಯಾವ ರೀತಿಯಲ್ಲಿ ಆಗಿರುತ್ತದೆಂದರೆ ನನ್ನ ತಂದೆ ಹೇಳಿದ ಪ್ರಕಾರ ಬರವಣಿಗೆ ಮೂಲಕ ಆಗಿರುತ್ತದೆಂದು ನುಡಿಯುತ್ತೇನೆ. ಈ ಬಗ್ಗೆ ದಾಖಲೆಯನ್ನು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ತಿಮ್ಮರಾಜು ಬಿನ್ ನರಸರಾಜು ಮತ್ತು ವೆಂಕಟರಾಜು ಬಿನ್ ನರಸರಾಜು ರವರ ಜೊತೆಯಲ್ಲಿಯೇ ನರಸರಾಜು ರವರ ಮಕ್ಕಳಾದ ಗೋವಿಂದರಾಜು, ಪಾಪರಾಜು ಮತ್ತು ಪುಟ್ಟರಾಜು ರವರಿಗೂ ವಿಭಾಗ ಮಾಡಿ ಸ್ವತ್ತುಗಳನ್ನು ನೀಡಲಾಗಿರುತ್ತದೆಂದರೆ ಸರಿಯಲ್ಲ.

ಪ್ರಸ್ತುತವಾಗಿ ಯಾರು ದಾವ ಸ್ವತ್ತಿನ ಸ್ವಾಧೀನದಲ್ಲಿದ್ದಾರೆ ಎಂದರೆ 21 ನೇ ಪ್ರತಿವಾದಿ ಶ್ರೀನಿವಾಸ, 25 ನೇ ಪ್ರತಿವಾದಿ ಬಾಲರಾಜು ಮತ್ತು 23 ನೇ ಪ್ರತಿವಾದಿ ನಾರಾಯಣರಾಜು ರವರು ಸ್ವಾಧೀನದಲ್ಲಿದ್ದಾರೆಂದು ನುಡಿಯುತ್ತೇನೆ. 21, 23 ಮತ್ತು 25 ನೇ ಪ್ರತಿವಾದಿಯರು ಎಷ್ಟು ವಿಸ್ತೀರ್ಣದ ದಾವ ಸ್ವತ್ತಿನ ಸ್ವಾಧೀನ ಹೊಂದಿರುತ್ತಾರೆಂದರೆ ಸಂಪೂರ್ಣವಾದ ಸ್ವಾಧೀನ ಹೊಂದಿರುತ್ತಾರೆ ಎಂದು ನುಡಿಯುತ್ತೇನೆ. 21, 23 ಮತ್ತು 25 ನೇ ಪ್ರತಿವಾದಿಯರು ದಾವ ಸ್ವತಿನ 2 ಎಕರೆ 2 ಗುಂಟೆ ವಿಸ್ತೀರ್ಣದ ಸ್ವತ್ತಿನಲ್ಲಿ ಮಾತ್ರ ಸ್ವಾಧೀನ ಹೊಂದಿರುತ್ತಾರೆಂದರೆ ಸರಿಯಲ್ಲ. ದಾವ ಸ್ವತ್ತಿನ 2 ಎಕರೆ ವಿಸ್ತೀರ್ಣದ ಸ್ವತ್ತಿನ ಸ್ವಾಧೀನವನ್ನು ನರಸರಾಜು ರವರ ಮೊದಲನೇ ಮಗ ಗೋವಿಂದರಾಜು ರವರ ವಾರಸುದಾರರು ಸ್ವಾಧೀನ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ನಾನು ದಾವ ಸ್ವತ್ತನ್ನು ನೋಡಿರದ ಕಾರಣ ಯಾರು ಯಾರು ಎಷ್ಟು ವಿಸ್ತೀರ್ಣದ ಸ್ವತ್ತಿನ ಸ್ವಾಧೀನದಲ್ಲಿರುತ್ತಾರೆ ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲವೆಂದರೆ ಸರಿಯಲ್ಲ.

ನನ್ನ ತಂದೆ ಗೋಪಾಲರಾಜು ರವರ ತಾತ ಪಾಪರಾಜು ರವರಿಗೆ 3 ಜನ ಮಕ್ಕಳಿರುತ್ತಾರೆ. ಸದರಿ ಪಾಪರಾಜು ರವರಿಗೆ 4 ಜನ ಮಕ್ಕಳಿರುತ್ತಾರೆಂದರೆ ನನಗೆ ನಿಖರವಾದ ಮಾಹಿತಿ ಇರುವುದಿಲ್ಲವೆಂದು ನುಡಿಯುತ್ತೇನೆ. ನಮ್ಮ ವಂಶವೃಕ್ಷದ ಬಗ್ಗೆ ನನಗೆ ಸರಿಯಾದ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಪಾಪರಾಜು ರವರ ಮಕ್ಕಳ ಹೆಸರು

ಹೇಳಲು ಆಗುವುದಿಲ್ಲ. ನನ್ನ ತಂದೆಗೆ ಪುಟ್ಟಮ್ಮ, ಲಕ್ಷ್ಮಮ್ಮ, ಪಾಪರಾಜು, ಕಮಲಮ್ಮ ಮತ್ತು ಸರಸ್ವತಮ್ಮ ಸಹೋದರ–ಸಹೋದರಿಯರಾಗಿರುತ್ತಾರೆ. ನನ್ನ ತಂದೆ ಸಹೋದರಿ ಪುಟ್ಟಮ್ಮ ಈಗ ಜೀವಂತವಿರುತ್ತಾರೆ. ಸದರಿ ಪುಟ್ಟಮ್ಮನವರನ್ನು ಈ ದಾವೆಯಲ್ಲಿ ಪಕ್ಷಗಾರಳನ್ನಾಗಿ ಮಾಡಿರುವುದಿಲ್ಲವೆಂದರೆ ಸದರಿಯವರು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡಿದ್ದರಿಂದ ಹಾಗೂ ಅವರ ಸಂಪರ್ಕವಿರದ ಕಾರಣ ಅವರನ್ನು ಪಕ್ಷಗಾರಳನ್ನಾಗಿ ಮಾಡಿರುವುದಿಲ್ಲವೆಂದು ನುಡಿಯುತ್ತೇನೆ. ನಿಪಿ-2 ದಾಖಲೆಯಲ್ಲಿ ಪುಟ್ಟಮ್ಮನವರನ್ನು ಕಾಣಿಸದ ಕಾರಣ ಅದು ಸುಳ್ಳು ದಾಖಲೆಯಾಗಿರುತ್ತದೆಂದರೆ ಸರಿಯಲ್ಲ. ನನ್ನ ತಂದೆ ಸಹೋದರಿ ಲಕ್ಷ್ಮಮ್ಮ ಈಗ ಮೃತಪಟ್ಟಿರುತ್ತಾರೆ. ಸದರಿಯವರಿಗೆ ಮಕ್ಕಳಿರುತ್ತಾರೆ. ಸದರಿ ಲಕ್ಷ್ಮಮ್ಮನವರ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲವೆಂದರೆ ಸದರಿಯವರು ಪ್ರತ್ಯೇಕವಾಗಿದ್ದು, ಅವರ ಸಂಪರ್ಕ ನಮಗೆ ಇರುವುದಿಲ್ಲವೆಂದು ನುಡಿಯುತ್ತೇನೆ.

ಮೂಲಪುರುಷ ನರಸರಾಜು ಬಿನ್ ಗೋವಿಂದರಾಜುರವರ ಮಗ ಪುಟ್ಟರಾಜುರವರಿಗೆ 3 ಜನ ಮಕ್ಕಳಿರುತ್ತಾರೆ. ಸದರಿಯವರ ಹೆಸರುಗಳು ನನಗೆ ಗೊತ್ತಿರುವುದಿಲ್ಲ. ಪುಟ್ಟರಾಜು ರವರ ವಾರಸುದಾರರು ಯಾರು ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲವೆಂದರೆ ಸರಿಯಲ್ಲ.

(ಈ ಹಂತದಲ್ಲಿ ಪ್ರತಿವಾದಿಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,
ಕುಣಿಗಲ್.